# ಪಿಂಕ್ ಲ್ಯಾಪಾಚೊ ಚೆಲುವೆಲ್ಲ ನಂದೆಂದಿತು



ಮುಗುಳುನಗುವ ಸ್ವಾಗತಕಾರಿಣಿಯರಂತೆ ರಸ್ತೆ ಬದಿಗಳಲ್ಲಿ ಕಂಗೊಳಿಸುವ 'ಪಿಂಕ್ ಲ್ಯಾಪಾಚೊ' ಮರ ಕಣ್ಣಿಗಷ್ಟೇ ಸೊಗಸಲ್ಲ, ಔಷಧೀಯ ಗುಣಗಳಿಂದಲೂ ಸಮೃದ್ಧವಾಗಿದೆ.

■ ಡಾ. ಮಹದೇಶ್ವರ ಸ್ವಾಮಿ

'ವರುಷಕೊಂದು ಹೊಸತು ಜನ್ಮ ಹರುಷಕೊಂದು ಹೊಸತು ನೆಲೆಯ' ಎನ್ನುವ ಕವಿಮಾತನ್ನು ದಿಟಗೊಳಿಸುವಂತೆ, ಚಳಿಗಾಲದ ಆರಂಭದಲ್ಲಿ ಅನೇಕ ಮರಗಳ ಜೀವನದಲ್ಲಿ ಬದಲಾವಣೆ ಉಂಟಾಗುತ್ತದೆ. ಕೆಲವು ಮರಗಳು ತಮ್ಮ ಎಲೆಗಳನ್ನು ಉದುರಿಸಿ ಹೊಸ ಚಿಗುರಿನ ಬೆಳವಣಿಗೆಯನ್ನು ಆರಂಭಿಸುತ್ತವೆ. ಈ ನವ ಯೌವನ ಪಡೆಯುವ ವಿದ್ಯಮಾನವು ಹೇಮಂತ ಋತುವಿನಲ್ಲಿ (ಡಿಸೆಂಬರ್‌ನಲ್ಲಿ) ಪ್ರಾರಂಭವಾಗುತ್ತದೆ. ಹೀಗೆ ಹೊಸ ವೇಷಭೂಷಣದಲ್ಲಿ ಬದಲಾಗುವ ಮರಗಳಲ್ಲಿ 'ಪಿಂಕ್ ಲ್ಯಾಪಾಚೊ' ಅತ್ಯಂತ ಪ್ರಮುಖವಾದದ್ದು.

'ಪಿಂಕ್ ಲ್ಯಾಪಾಚೊ' ಎಲೆಗಳಿಲ್ಲದ ಸ್ಥಿತಿಯಲ್ಲಿ ಸುಂದರವಾದ ಹೂಗೊಂಚಲುಗಳಿಂದ ರಸ್ತೆಗಳು ಹಾಗೂ ಉದ್ಯಾನವನಗಳಲ್ಲಿ ಕಂಗೋಳಿಸುತ್ತದೆ; ಕಣ್ಣಿಗೆ ಹಬ್ಬದ ನೋಟವನ್ನು ನೀಡುತ್ತದೆ. ದಾರಿಹೋಕರ ಕಣ್ಣುಗಳಿಗೆ ರಸದೌತಣ ನೀಡುವ ಇದು ಅತ್ಯಂತ ಸುಂದರವಾದ ಅಲಂಕಾರಿಕ ಮರಗಳಲ್ಲೊಂದು.

'ಪಿಂಕ್ ಲ್ಯಾಪಾಚೊ' ದಕ್ಷಿಣ ಅಮೆರಿಕ ಮೂಲದ್ದು. ಇದನ್ನು 'ಪಿಂಕ್ ಟ್ರಂಪೆಟ್ ಟ್ರೀ', 'ಪಿಂಕ್ ತಬೂಬಿಯಾ', 'ಲ್ಯಾವೆಂಡರ್ ಟ್ರಂಪೆಟ್ ಟ್ರೀ', 'ಐಪೆ ರೋಕ್ಸೋ', 'ತಾಹೆಬೂ ಟ್ರೀ', 'ಬಸಂತ್ ರಾಣಿ', 'ಗುಲಾಬಿ ತಬೂಬಿಯಾ' ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಇದು ಬಿಗ್ನೋನಿಯೇಸಿ ಕುಟುಂಬಕ್ಕೆ ಸೇರಿದ ಮರ.

ಇದು ದೊಡ್ಡ ಮರ. ಕೆಲವೊಮ್ಮೆ 30 ಮೀಟರ್ ಎತ್ತರವನ್ನು ತಲುಪುತ್ತದೆ. ಮರದ ಪ್ರಮುಖಕಾಂಡದ ವ್ಯಾಸ 60–80 ಸೆಂ.ಮೀ. ಇರಬಹುದು. ಆ ಕಾಂಡ ಮರದ ಮೂರನೇ ಒಂದು ಭಾಗದಷ್ಟಿರಬಹುದು. ಉಳಿದ ಎರಡರಷ್ಟು ಭಾಗ ಉದ್ದವಾದ ಶಾಖೆಗಳ ರೂಪದ್ದು. ತೊಗಟೆಯು ಕಂದು ಬೂದು ಬಣ್ಣದ್ದಾಗಿದ್ದು ಗಟ್ಟಿಯಾಗಿರುತ್ತದೆ. ಮರವು ಆಹ್ಲಾದಕರ ಹಳದಿ ಬಣ್ಣವನ್ನು ಹೊಂದಿರುತ್ತದೆ, ಕೆಲವೊಮ್ಮೆ ಗಂಟುಗಳಿಂದ ಕೂಡಿರುತ್ತದೆ. ಎಲೆಗಳು 2ರಿಂದ 3 ಇಂಚು ಉದ್ದದ ತೊಟ್ಟುಗಳೊಂದಿಗೆ ಕಾಂಡದ ಮೇಲೆ ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿ ವ್ಯವಸ್ಥಿತವಾಗಿ ಜೋಡಣೆಯಾಗಿರುತ್ತವೆ. ಹೂದಳಗಳು ಹೆಚ್ಚಾಗಿ ಗುಲಾಬಿ ಅಥವಾ ಕೆನ್ನೀರಳೆ ಬಣ್ಣದ್ದಾಗಿದ್ದು, ಸುಮಾರು 2 ಇಂಚು ಉದ್ದವಾಗಿರುತ್ತವೆ. ಹಲವಾರು ರೆಕ್ಕೆಯ ಬೀಜಗಳನ್ನು ಹೊಂದಿರುವ ಕಿರಿದಾದ ಹಣ್ಣುಗಳನ್ನು 'ಡಿಹಿಸೆಂಟ್ ಕ್ಯಾಪ್ಸುಲ್' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಈ ರೀತಿಯ ಒಣ ಡಿಹಿಸೆಂಟ್ ಹಣ್ಣುಗಳನ್ನು ಕಾಣುವುದು ವಿರಳ.

### ಮರ ನೆಡುವವರ ಗಮನಕ್ಕೆ...

- ಉಷ್ಣವಲಯದ ಎತ್ತರದ ಜಾತಿಯ ಈ ಮರ ಬೆಂಗಳೂರು ಮತ್ತು ಮೈಸೂರಿನಂತಹ ಉಪೋಷ್ಣವಲಯದ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ.
- ರಸ್ತೆಗಳು, ಖಾಸಗಿ ಉದ್ಯಾನಗಳು ಮತ್ತು ಉದ್ಯಾನವನಗಳು ಮತ್ತು ಅದರ ಸೌಂದರ್ಯ ಮತ್ತು ನೆರಳಿಗಾಗಿ ಇತರ ಸ್ಥಳಗಳಲ್ಲಿ ನೆಡಲು ಇದು ಅತ್ಯಂತ ಸೂಕ್ತವಾಗಿದೆ.
- ಹೂಬಿಡುವ ಕಾಲವು ಡಿಸೆಂಬರ್‌ನಿಂದ ಜನವರಿ. ಹೂವುಗಳು ಒಂದು ಅಥವಾ ಎರಡು ವಾರಗಳವರೆಗೆ ಮರದ ಮೇಲೆ ಉಳಿಯುತ್ತವೆ.
- ಸುಂದರವಾದ ನೋಟವನ್ನು ಒದಗಿಸಲು ರಸ್ತೆಗಳ ಎರಡೂ ಬದಿಗಳಲ್ಲಿ ಸಾಲಾಗಿ ಅವುಗಳನ್ನು ನೆಡಬಹುದು.
- ಮರವು ನಿಧಾನಗತಿಯ ಬೆಳವಣಿಗೆಯನ್ನು ಹೊಂದಿದೆ. ಮರದ ಬೆಳವಣಿಗೆಯ ದೃಷ್ಟಿಯಿಂದ ಬೇಸಗೆಯಲ್ಲಿ ನಿಯಮಿತವಾಗಿ ನೀರುಹಾಕುವುದು ಅಗತ್ಯ.

## ಬಹು ಉಪಯೋಗಿ

ಇದು ಕಾಡಿನಲ್ಲಿ ಬೆಳೆಯುವ ಬಹುಪಯೋಗಿ ಮರವಾಗಿದೆ. ನೆಲಹಾಸು ಮತ್ತು ಡೆಕ್ಕಿಂಗ್ ಮಾಡಲು ಬಳಸುವ ಬೆಲೆಬಾಳುವ ಮರವಾಗಿ ಹೆಸರುವಾಸಿಯಾಗಿದೆ.

ಗಿಡಮೂಲಿಕೆ ತಜ್ಞರು ಈ ಮರದ ಭಾಗಗಳನ್ನು ಇಮ್ಯುನೊಸ್ಟಿಮ್ಯುಲಂಟ್ ಮತ್ತು ಕರುಳಿನ ಕ್ಯಾಂಡಿಡಿಯಾಸಿಸ್ ಸಮಸ್ಯೆಗಳಿಗೆ ಔಷಧಿಯಾಗಿ ಬಳಸುತ್ತಾರೆ. ಲ್ಯಾಪಾಚೋ ಅಥವಾ ತಹೀಬೋ ಎಂದು ಕರೆಯಲಾಗುವ ಕಂದು ಬಣ್ಣದ ಕಹಿ ಚಹಾವನ್ನು ಮರದ ಒಳ ತೊಗಟೆಯಿಂದ ತಯಾರಿಸಲಾಗುತ್ತದೆ. ಈ ಚಹವನ್ನು ಜ್ವರ, ಶೀತ, ಮತ್ತು ಧೂಮಪಾನಿಗಳ ಕೆಮ್ಮನ್ನು ಸರಾಗಗೊಳಿಸುವ ಟಾನಿಕ್ ಆಗಿ ವ್ಯಾಪಕವಾಗಿ ಬಳಸಲಾಗುತ್ತದೆ. ಆದರೆಮ ಸಸ್ಯದ ಭಾಗಗಳ ಅತಿಯಾದ ಬಳಕೆಯು ವಾಕರಿಕೆ, ವಾಂತಿ, ತಲೆತಿರುಗುವಿಕೆ ಮತ್ತು ಅತಿಸಾರಕ್ಕೆ ಕಾರಣವಾಗಬಹುದು.

ಪ್ರತಿಕ್ರಿಯಿಸಿ: feedback@sudha.co.in